## ತುಳಸಿ ವಿಗ್ರಹ

ತುಳಸಿ ಗಿಡವನ್ನು ಕಟ್ಟೆಯಲ್ಲಿ ನೆಟ್ಟು, ನೀರುಣಿಸಿ ಪೂಜಿಸುವುದು ವಾಡಿಕೆ. ತುಳಸಿ ಕಟ್ಟೆಯ ಜೊತೆಯಲ್ಲಿ ತುಳಸಿ ಮಾತೆಯ ವಿಗ್ರಹವನ್ನು ಮಾಡಿಸಿ ಪೂಜಿಸುವ ಪದ್ಧತಿ ತುಸು ವಿಶೇಷವಲ್ಲವೆ? ಇದನ್ನು ನಾನು ಕಂಡಿದ್ದು ಒಡಿಶಾದ ಪುರಿ ಪಟ್ಟಣದಲ್ಲಿ. ಮನೆಗಳ ಎದುರು ಇರುವ ತುಳಸಿಕಟ್ಟೆಗಳಿಗೆ ಅಂಟಿಕೊಂಡಂತೆ, ತುಳಸಿ ವಿಗ್ರಹವನ್ನು ಸಹಾ ಸಿಮೆಂಟಿನಿಂದ ಮಾಡಿಸುವ ಪದ್ಧತಿ ಅಲ್ಲಿದೆ.

**– ಎಂ.ಎಸ್. ಶಶಿಧರ, ಹಾಲಾಡಿ**





## ಚಿಟ್ಟೆಯೂ, ಮಧುವೂ..

ಚಿಟ್ಟೆಗಳ ಬಣ್ಣಕ್ಕೆ ಬೆರಗಾಗುವ ನಾವು ಅವುಗಳು ಹೂವಿನಲ್ಲಿ ಮಧು ಹೀರುವ ಪರಿಯನ್ನೊಮ್ಮೆ ಗಮನಿಸಬೇಕು! ಪ್ರೊಬಾಸಿಸ್ (Proboscis) ಎನ್ನುವ ತನ್ನ ಕೊಳವೆ ರೂಪದ ನಾಲಿಗೆಯನ್ನು ಹೂವಿಗೆ ಚುಚ್ಚಿ ನಾವು ಕೊಳವೆಯಲ್ಲಿ ಎಳನೀರು ಹೀರಿದಂತೆ ಹೀರುತ್ತದೆ. ಕಾಮನ್ ಎಮಿಗ್ರಂಟ್ ಅಥವಾ ಲೆಮನ್ ಎಮಿಗ್ರಂಟ್ (Common Emigrant ಅಥವಾ Lemon Emigrant) ಎನ್ನುವ ಸಲ್ಫರ್–ಹಳದಿ ಬಣ್ಣದ ರೆಕ್ಕೆಯ ಚಿಟ್ಟೆ ಕ್ಯಾಮೆರಾದಲ್ಲಿ ಸೆರೆಯಾದ ಬಗೆಯಿದು!

**ಚಿತ್ರ- ಬರಹ: ಪೂರ್ಣೇಶ್ ಮತ್ತಾವರ, ಮೂಡಿಗೆರೆ**

## ಒರಳಕಲ್ಲು ಪೂಜೆ

ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಮದುವೆ ಸಮಾರಂಭದಲ್ಲಿ ಹಲವು ವಿಧಿ ವಿಧಾನಗಳು ನಡೆಯುತ್ತವೆ. ಪ್ರತಿಯೊಂದು ಆಚರಣೆ ತನ್ನದೇ ಆದ ಮಹತ್ವ ಹೊಂದಿದೆ. ಅದರಲ್ಲೊಂದು ಒಳಕಲ್ಲ ಪೂಜೆ ಅಥವಾ ಒರಳುಕಲ್ಲು ಪೂಜೆ.

ಈ ಒಳಕಲ್ಲು ಅಥವಾ ಬೀಸುವ ಕಲ್ಲು ಬೇಕಾಗುವುದು ಮದುವೆ ಸಮಯದಲ್ಲಿ ಮಾತ್ರ. ಅದೂ ಕೂಡಾ ಪೂಜೆ ಮಾಡಲು ಅಷ್ಟೆ. ಒಳಕಲ್ಲು ಪೂಜೆ ಎಂಬ ಸಾಂಪ್ರದಾಯಿಕ ಶಾಸ್ತ್ರದೊಂದಿಗೆ ಮದುವೆ ಸಮಾರಂಭದ ಎಲ್ಲ ಕಾರ್ಯಗಳು ಆರಂಭವಾಗುತ್ತವೆ. ಮದುವೆ ದಿನದಂದು ಮನೆಯಲ್ಲಿನ ಒಳಕಲ್ಲಿಗೆ ರೇಷ್ಮೆ ಸೀರೆ ಉಡಿಸಿ, ಸಿಹಿ ಮೃಷ್ಟಾನ್ನ ನೈವೇದ್ಯ ಮಾಡಿ ವಿಶೇಷ ಪೂಜೆ ಮಾಡಲಾಗುತ್ತದೆ. ಅಷ್ಟು ಬಿಟ್ಟರೆ ಮಿಕ್ಸಿ, ಗ್ರೈಂಡರ್‌ನ ಇಂದಿನ ದಿನಗಳಲ್ಲಿ ಈ ಒಳಕಲ್ಲು ಮತ್ತಾವ ಕಾರ್ಯಕ್ಕೂ ಬೇಕಾಗಿಲ್ಲ.

**ಚಿತ್ರ- ಬರಹ: ಮಲ್ಲಿಕಾರ್ಜುನ ರಾಜನಾಳ, ಬಾಗಲಕೋಟ**

